# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ: ಶಾಶ್ವತ ನಿವಾಸ ಪ್ರಮಾಣಪತ್ರ (PRC)ಗಳ ಸುಗಮ ಹಾಗೂ ಕಾಲಬದ್ಧ ವಿತರಣೆಗೆ ಮತ್ತು ಇತರೆ ಸರ್ಕಾರಿ ಪ್ರಮಾಣಪತ್ರಗಳು ಹಾಗೂ ನಾಗರಿಕ ಸೇವೆಗಳ ವಿತರಣೆಗೆ ಕಾರ್ಯಾಚರಣಾ ಚೌಕಟ್ಟು .**

* * * * *

**ಓದಲಾಗಿದೆ:**

ಶಾಶ್ವತ ನಿವಾಸ ಪ್ರಮಾಣಪತ್ರ (PRC) ನೀಡುವ ಕುರಿತು ಸಮಗ್ರ ಮಾರ್ಗಸೂಚಿಗಳನ್ನು ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ ಕಂಇ 36 ಎಜೆಎಸ್ 2026 ದಿನಾಂಕ 29/06/2026.

**ಪ್ರಸ್ತಾವನೆ:**

ಮೇಲೆ ಓದಲಾದ ಸರ್ಕಾರದ ಆದೇಶದನ್ವಯ ಅರ್ಹ ವ್ಯಕ್ತಿಗಳಿಗೆ ಶಾಶ್ವತ ನಿವಾಸ ಪ್ರಮಾಣಪತ್ರಗಳನ್ನು ನೀಡುವ ಕುರಿತು ಸಮಗ್ರ ಮಾರ್ಗಸೂಚಿಗಳನ್ನು ಸರ್ಕಾರ ಹೊರಡಿಸಿದ್ದು, ವಿವಿಧ ಸರ್ಕಾರಿ ಪ್ರಮಾಣಪತ್ರಗಳು ಹಾಗೂ ನಾಗರಿಕ ಸೇವೆಗಳನ್ನು ಪ್ರಚಲಿತ ಸರ್ಕಾರದ ಆದೇಶಗಳು, ಸುತ್ತೋಲೆಗಳು ಮತ್ತು ಮಾರ್ಗಸೂಚನೆಗಳನ್ವಯ ಒದಗಿಸಲಾಗುತ್ತಿದೆ.

ಶಾಶ್ವತ ನಿವಾಸ ಪ್ರಮಾಣಪತ್ರವು ಮಹತ್ವದ ಸಾರ್ವಜನಿಕ ದಾಖಲೆಯಾಗಿದ್ದು, ಪ್ರವೇಶ, ನೇಮಕಾತಿ, ವಿದ್ಯಾರ್ಥಿವೇತನ, ಕಲ್ಯಾಣ ಯೋಜನೆಗಳು ಹಾಗೂ ಸರ್ಕಾರದ ನೀತಿಗಳ ಅಡಿಯಲ್ಲಿ ವಿವಿಧ ಉದ್ದೇಶಗಳಿಗೆ ಅಗತ್ಯವಾಗಿದೆ.

ನಾಗರಿಕ ಕೇಂದ್ರೀಕೃತ ಸೇವೆಗಳನ್ನು ಪಾರದರ್ಶಕ, ಸುಲಭ, ಸಮರ್ಥವಾಗಿ ಮತ್ತು ಕಾಲಮಿತಿಯೊಳಗೆ ಡಿಜಿಟಲ್ ಆಡಳಿತದ ಮೂಲಕ ಒದಗಿಸುವುದು ಸರ್ಕಾರದ ಉದ್ದೇಶವಾಗಿದೆ.

ಶಾಶ್ವತ ನಿವಾಸ ಪ್ರಮಾಣಪತ್ರ ಸೇವೆಯನ್ನು ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011ರ ಅಡಿಯಲ್ಲಿ ಅಧಿಸೂಚಿಸಲು ಸರ್ಕಾರ ನಿರ್ಧರಿಸಿದೆ.

ರಾಜ್ಯದಾದ್ಯಂತ ಶಾಶ್ವತ ನಿವಾಸ ಪ್ರಮಾಣ ಪತ್ರ ಹಾಗೂ ಇತರೆ ಸರ್ಕಾರಿ ಪ್ರಮಾಣಪತ್ರಗಳು ಮತ್ತು ನಾಗರಿಕ ಸೇವೆಗಳನ್ನು ವಿತರಿಸುವ ಪ್ರಕ್ರಿಯೆಯನ್ನು ಸರಳಗೊಳಿಸುವ ಹಾಗೂ ಡಿಜಿಟಲ್ ಸೇವಾ ವಿತರಣಾ ವ್ಯವಸ್ಥೆಯನ್ನು ಸ್ಥಾಪಿಸುವ ಅಗತ್ಯತೆಯನ್ನು ಸರ್ಕಾರ ಮನಗಂಡು, ತತ್ಸಂಬಂಧ ಕಾರ್ಯಗತಗೊಳಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

## ಸರ್ಕಾರದ ಆದೇಶ ಸಂಖ್ಯೆ. ಕಂಇ 36 ಎಜೆಎಸ್ 2026 (1) ಬೆಂಗಳೂರು. ದಿನಾಂಕ: 29.06.2026

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯದಾದ್ಯಂತ ಶಾಶ್ವತ ನಿವಾಸ ಪ್ರಮಾಣ ಪತ್ರ ಹಾಗೂ ಇತರೆ ಸರ್ಕಾರಿ ಪ್ರಮಾಣಪತ್ರಗಳು ಮತ್ತು ನಾಗರಿಕ ಸೇವೆಗಳನ್ನು ವಿತರಿಸುವ ಸಂಬಂಧ ಈ ಕೆಳಕಂಡ ಮಾರ್ಗಸೂಚನೆಗಳನ್ನು ನೀಡಿ ಆದೇಶಿಸಿದೆ.

**1. ವ್ಯಾಪ್ತಿ**

ಈ ಕಾರ್ಯಾಚರಣಾ ಚೌಕಟ್ಟು ಶಾಶ್ವತ ನಿವಾಸ ಪ್ರಮಾಣಪತ್ರಗಳ ವಿತರಣೆಗೆ ಅನ್ವಯವಾಗುತ್ತದೆ ಹಾಗೂ ಸರ್ಕಾರ ಅಧಿಸೂಚಿಸುವ ಇತರೆ ಸರ್ಕಾರಿ ಪ್ರಮಾಣಪತ್ರಗಳು ಮತ್ತು ನಾಗರಿಕ ಸೇವೆಗಳಿಗೂ ಅನ್ವಯಿಸುತ್ತದೆ.

**2. ಸಹಾಯ ಮತ್ತು ಸೌಲಭ್ಯ ಕೌಂಟರ್‌ಗಳು.**

ಪ್ರತಿ ಗ್ರಾಮ ಪಂಚಾಯಿತಿ ಹಾಗೂ ಪ್ರತಿಯೊಂದು ನಗರ ಸ್ಥಳೀಯ ಸಂಸ್ಥೆಯ ವಾರ್ಡ್ ಕಚೇರಿಯಲ್ಲಿ ಕಂಪ್ಯೂಟರ್, ಇಂಟರ್ನೆಟ್, ಮುದ್ರಣ, ಸ್ಕ್ಯಾನಿಂಗ್ ಮತ್ತು ಅಗತ್ಯ ಮೂಲಸೌಕರ್ಯಗಳೊಂದಿಗೆ ಸಹಾಯ ಮತ್ತು ಸೌಲಭ್ಯ ಕೌಂಟರ್ ಸ್ಥಾಪಿಸಬೇಕು. ಅಟಲ್ ಜನಸ್ನೇಹಿ ಕೇಂದ್ರಗಳು, ಬೆಂಗಳೂರು ಒನ್, ಕರ್ನಾಟಕ ಒನ್, ಗ್ರಾಮ ಒನ್, CSCಗಳು ಮತ್ತು ಇತರೆ ಅಧಿಕೃತ ಕೇಂದ್ರಗಳು ಅರ್ಜಿಗಳನ್ನು ಪ್ರಕ್ರಿಯೆಗೊಳಿಸುತ್ತವೆ.

**3. ಆನ್‌ಲೈನ್ ಅರ್ಜಿ**

ಅರ್ಹ ಅರ್ಜಿದಾರರು ಸೇವಾ ಸಿಂಧು ಪೋರ್ಟಲ್, ಅಟಲ್ ಜನಸ್ನೇಹಿ ಕೇಂದ್ರ (AJSK) ಪೋರ್ಟಲ್ ಅಥವಾ ಸರ್ಕಾರ ಕಾಲಕಾಲಕ್ಕೆ ಅಧಿಸೂಚಿಸುವ ಇತರೆ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬಹುದು.

**4. ಸ್ಥಾಪನೆ ಮತ್ತು ಕಾರ್ಯಾಚರಣೆ**

(i) ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಕೌಂಟರ್‌ಗಳನ್ನು ಸ್ಥಾಪಿಸಬೇಕು.

(ii) ಮಹಾನಗರ ಪಾಲಿಕೆ ಆಯುಕ್ತರು ಹಾಗೂ ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳ ಮುಖ್ಯಾಧಿಕಾರಿಗಳು ನಗರ ಪ್ರದೇಶಗಳಲ್ಲಿ ಕೌಂಟರ್‌ಗಳನ್ನು ಸ್ಥಾಪಿಸಬೇಕು.

(iii) ಈ ಆದೇಶದಿಂದ ಏಳು (7) ದಿನಗಳೊಳಗೆ ಅಥವಾ ಸರ್ಕಾರ ಅಧಿಸೂಚಿಸುವ ಅವಧಿಯಲ್ಲಿ ಕಾರ್ಯಾರಂಭ ಮಾಡಬೇಕು.

(iv) ಜಿಲ್ಲಾಧಿಕಾರಿಗಳು ಸಹಾಯ ಮತ್ತು ಸೌಲಭ್ಯ ಕೌಂಟರ್‌ಗಳ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡಬೇಕು. ಎಲ್ಲಾ ಅನುಷ್ಠಾನ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸಿ, ಸಹಾಯ ಸೌಲಭ್ಯ ಕೌಂಟರ್‌ಗಳ ಕಾರ್ಯನಿರ್ವಹಣೆಯನ್ನು ಪರಿಶೀಲಿಸಬೇಕು ಮತ್ತು ಸಕಾಲ ಕಾಲಮಿತಿಯಲ್ಲಿ ಅನುಸರಣೆಯಾಗುತ್ತಿರುವುದನ್ನು ಖಚಿತಪಡಿಸಿಕೊಳ್ಳಬೇಕು.

**5. ಸರ್ಕಾರಿ ದತ್ತಾಂಶ ಬಳಕೆ**

ಸರ್ಕಾರವು ಪರಿಶೀಲನೆಯನ್ನು ಸುಗಮಗೊಳಿಸಲು, ದಾಖಲೆಗಳನ್ನು ಸಲ್ಲಿಸುವ ಅಗತ್ಯವನ್ನು ಕಡಿಮೆ ಮಾಡಲು ಮತ್ತು ಈಗಾಗಲೇ ಭರ್ತಿ ಮಾಡಿದ ಆನ್‌ಲೈನ್ ಅರ್ಜಿಗಳನ್ನು ಸಕ್ರಿಯಗೊಳಿಸಲು ಸೀಮಿತ ಉದ್ದೇಶಕ್ಕಾಗಿ, ಕುಟುಂಬ, ಶೈಕ್ಷಣಿಕ ದತ್ತಾಂಶಗಳು, ನಿವಾಸ

ದತ್ತಾಂಶಗಳು, ಮತದಾರರ ಪಟ್ಟಿಗಳು ಮತ್ತು ಕಾಲಕಾಲಕ್ಕೆ ಸೂಚಿಸಬಹುದಾದ ಇತರ ಸರ್ಕಾರಿ ದತ್ತಾಂಶಗಳು ಸೇರಿದಂತೆ ಅಧಿಕೃತ ಸರ್ಕಾರಿ ದತ್ತಾಂಶಗಳನ್ನು ಬಳಸಿಕೊಳ್ಳತಕ್ಕದ್ದು.

ಆದರೆ ಪ್ರಮಾಣಪತ್ರ ನೀಡುವ ಮೊದಲು ಅರ್ಹತೆಯನ್ನು ಸಕ್ಷಮ ಪ್ರಾಧಿಕಾರವು ಸ್ವತಂತ್ರವಾಗಿ ದೃಢೀಕರಿಸಿಕೊಳ್ಳ ಬೇಕು.

**6. ಡಿಜಿಟಲ್ ವೇದಿಕೆ**

ಅಟಲ್ ಜನಸ್ನೇಹಿ ಕೇಂದ್ರಗಳ ನಿರ್ದೇಶನಾಲಯವು National Informatics centre, ಬೆಂಗಳೂರು ಈ ಸಂಸ್ಥೆಯ ಸಹಕಾರದೊಂದಿಗೆ ಡಿಜಿಟಲ್ ವೇದಿಕೆಯನ್ನು ಅನುಷ್ಠಾನಗೊಳಿಸಿ ಕಾರ್ಯಗತಗೊಳಿಸಬೇಕು. DPAR (e-Governance) ಇಲಾಖೆಯು ದತ್ತಾಂಶ ಏಕೀಕರಣವನ್ನು ಸಮನ್ವಯಗೊಳಿಸಬೇಕು.

**7. ಮೇಲ್ವಿಚಾರಣೆ**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ಇವರು ಈ ಯೋಜನೆಯ ಅನುಷ್ಠಾನವನ್ನು ಕಾಲಕಾಲಕ್ಕೆ ಪರಿಶೀಲಿಸ ತಕ್ಕದ್ದು. ಎಲ್ಲಾ ಜಿಲ್ಲಾಧಿಕಾರಿಗಳು ಕಾಲಕಾಲಕ್ಕೆ ವರದಿಗಳನ್ನು ಸಲ್ಲಿಸ ತಕ್ಕದ್ದು.

**8. ಕಾರ್ಯಾಚರಣಾ ಸೂಚನೆಗಳು.**

ಕಂದಾಯ ಇಲಾಖೆಯು SOPಗಳು, ತಾಂತ್ರಿಕ ಮಾರ್ಗಸೂಚಿಗಳು, ಡಿಜಿಟಲ್ ವರ್ಕ್ ಫ್ಲೋಗಳು, ಅರ್ಜಿ ನಮೂನೆಗಳು, ಬಳಕೆದಾರ ಕೈಪಿಡಿಗಳು ಹಾಗೂ ಇತರೆ ಕಾರ್ಯಾಚರಣಾ ಸೂಚನೆಗಳನ್ನು ಹೊರಡಿಸ ತಕ್ಕದ್ದು. ಅಗತ್ಯವಿದ್ದಲ್ಲಿ ಈ ಕಾರ್ಯಾಚರಣೆ ಅನ್ವಯವಾಗುವ ಇತರೆ ಸರ್ಕಾರಿ ಪ್ರಮಾಣಪತ್ರಗಳು ಹಾಗೂ ಸರ್ಕಾರಿ ಸೇವೆಗಳಿಗೂ ಸಹ ಸಂಬಂಧಪಟ್ಟ ಆಡಳಿತ ಇಲಾಖೆಯೊಂದಿಗೆ ಸಮಾಲೋಚಿಸಿ ವಿಸ್ತರಿಸ ತಕ್ಕದ್ದು.

**9. ವ್ಯಾಖ್ಯಾನ**

ಈ ಆದೇಶದ ಅನುಷ್ಠಾನ ಕುರಿತು ಯಾವುದೇ ಸಂದೇಹ ಉಂಟಾದಲ್ಲಿ ಕಂದಾಯ ಇಲಾಖೆಯ ತೀರ್ಮಾನವೇ ಅಂತಿಮವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Digitally signed by
RAJENDER KUMAR KATARIA
Date: 29-06-2026 17:26:57

**(ರಾಜೇಂದರ್ ಕುಮಾರ್ ಕಟಾರಿಯಾ)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಕಂದಾಯ ಇಲಾಖೆ

**ಪ್ರತಿ:**

1. ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು
2. ಆಯುಕ್ತರು, ಕಂದಾಯ ಆಯುಕ್ತಾಲಯ, ಬೆಂಗಳೂರು
3. ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ
4. ನಿರ್ದೇಶಕರು, ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯ
5. ಎಲ್ಲಾ ಇಲಾಖಾ ಮುಖ್ಯಸ್ಥರು

6. ಎಲ್ಲಾ ಪ್ರಾದೇಶಿಕ ಆಯುಕ್ತರು
7. ಎಲ್ಲಾ ಜಿಲ್ಲಾಧಿಕಾರಿಗಳು/ ಎಲ್ಲಾ ಜಿಲ್ಲಾಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
8. ಎಲ್ಲಾ ಸಹಾಯಕ ವಿಭಾಗಾಧಿಕಾರಿಗಳು
9. ಎಲ್ಲಾ ನಗರ ಸ್ಥಳೀಯ ಸಂಸ್ಥೆಯ ಆಯುಕ್ತರು/ಮುಖ್ಯಾಧಿಕಾರಿಗಳು
10. ಎಲ್ಲಾ ತಹಶೀಲ್ದಾರ್‌ಗಳು
11. NIC, Bangalore.
12. ಶಾಖಾ ರಕ್ಷಾ ಕಡತಗಳು/ಇತರೆ